12

# ಏಳು ರೀತಿಯ ಐಕ್ಯತೆಯನ್ನು ಕಾದುಕೊಳ್ಳುವದು

# (4:4-6)

ಸಭೆಯ ಐಕ್ಯತೆಯ ಬಗ್ಗೆ ಚರ್ಚಿಸುತ್ತಿದಂತೆ ಪೌಲನು "ಒಂದೇ" ಎಂಬ ಸಂಗತಿಗಯ ಮೇಲೆ ಸಭೆಯ ಸದಸ್ಯರ ಐಕ್ಯದಿಂದ ಇರಬಹುದು ಎಂಬ ಏಳು ದಿವ್ಯ ಸಂಗತಿಗಳನ್ನು ಪಟ್ಟಿಮಾಡಿದ್ದಾನೆ. ದೇವರು ತನ್ನ ವಾಕ್ಯದಲ್ಲಿ ಹೇಳಿದವುಗಳನ್ನು ಗೌರವಿಸುವ ಈ ತತ್ವಗಳ ಮೇಲೆ ಕ್ರೈಸ್ತರು ಒಪ್ಪಿಕೊಳ್ಳುವದು ಐಕತ್ಯಗೆ ಅವಶ್ಯಕವಿದೆ.

## ಒಂದೇ ದೇಹ (4:4)

**4ನೀವೆಲ್ಲರೂ ಒಂದೇ ದೇಹಕ್ಕೆ ಸೇರಿದವರು, ...**

**ವಚನ 4. ಒಂದೇ ದೇಹಕ್ಕೆ ಸೇರಿದವರು** ಎಂದು ಸೂಚಿತವಾದದ್ದು ಕ್ರಿಸ್ತನ ದೇಹಕ್ಕೆ ಅದು ಸಭೆಯೇ ಆಗಿದೆ. ದೇವರು ಕ್ರಿಸ್ತನನ್ನು "ತನ್ನ ದೇಹವಾದ" ಸಭೆಗೆ ಶಿಪಸ್ಸಾಗಿ ಮಾಡಿದನು (1:22, 23). ಆತನು ಯೆಹೂದ್ಯರನ್ನೂ ಮತ್ತು ಅನ್ಯಜನರನ್ನೂ "ಒಬ್ಬ ನೂತನ ಮನುಷ್ಯನಲ್ಲಿ" ಮಾಡಿದನು ಮತ್ತು ಇಬ್ಬರನ್ನೂ "ಒಂದೇ ದೇಹದಲ್ಲಿ" ದೇವರಲ್ಲಿ ಶಿಲುಬೆಯ ಮೂಲಕ ಮರುಸಂಧಾನ ಮಾಡಿದನು (2:15, 16). ಅನ್ಯಜನರು "ಯೆಹೂದ್ಯರೊಂದಿಗೆ ಬಾಧ್ಯರು ಒಂದೇ ದೇಹದೊಳಗಣ ಅಂಗಗಳು" ಆಗಿದ್ದಾರೆ (3:6), ಮತ್ತು ಕ್ರಿಸ್ತ ದೇಹವು ಪ್ರತಿಯೊಬ್ಬ ಸದಸ್ಯರು ಅವನು ಅಥವಾ ಅವಳ ಪಾಲುತೆಗೆದುಕೊಳ್ಳುವಿಕೆಯಿಂದ ಕಟ್ಟಲ್ಪಟ್ಟಿದೆ ಎಂದು ಪೌಲನು ದೃಷ್ಟಾಂತಕರಿಸುವವನಾಗಿದ್ದಾನೆ (4:12, 16). ಕ್ರಿಸ್ತನು "ದೇಹದ ರಕ್ಷಕನಾಗಿದ್ದಾನೆ" ಎಂದು ಸಹ ನಾವು ಓದುತ್ತೇವೆ (5:23). ಈ ಹೇಳಿಕೆಗಳಿಂದ ಹೀಗೆ ಸಮಾರೋಪಿಸಬಹುದು: ಕ್ರಿಸ್ತನು ಒಂದೇ ದೇಹವನ್ನು ಹೊಂದಿದ್ದಾನೆ; ಆತನು ಒಂದು ದೇಹವು, ದೇವರಲ್ಲಿ ಮರುಸಂಧಾನಕ್ಕೊಳಗಾದ ಯೆಹೂದಿಗಳು ಮತ್ತು ಅನ್ಯಜನರಿಂದ ಮಾಡಲ್ಪಟ್ಟಿದೆ; ಆ ದೇಹವು ಪ್ರತಿಯೊಬ್ಬ ಸದಸ್ಯರು ತಾವು ಮಾಡಿದ ಪಾತ್ರದಿಂದ ಕಟ್ಟಲ್ಪಟ್ಟಿದೆ; ಮತ್ತು ಆ ದೇಹವು ರಕ್ಷಣೆಯಿಂದ ಮಾಡಲ್ಪಟ್ಟಿದೆ. ಇದು ದೇವರ ಸಂಧಾನಕ್ಕೊಳಪಟ್ಟರು ಮತ್ತು ಪಾಪದಿಂದ ರಕ್ಷಿಸಲ್ಪಟ್ಟಿದ್ದು, ಆತನೇ ಸಭೆಯ ಭಾಗವು ಆಗಿದೆ.

ಪಾಪದಿಂದ ರಕ್ಷಣೆಹೊಂದಬಹುದಾದ ಮತ್ತು ಎಂದೆಂದಿಗೂ ಸಭೆಯ ಭಾಗವಾಗಿದ ಒಬ್ಬ ವ್ಯಕ್ತಿಯು ಅಥವಾ ಒಬ್ಬ ವ್ಯಕ್ತಿಯು ರಕ್ಷಣೆಗಾಗಿ ಒಂದು ಸಂಗತಿಯನ್ನು ಮಾಡಿದವನೂ ಮತ್ತು ಇನ್ನೊಬ್ಬನು ಸಭೆಯ ಸದಸ್ಯನಾಗಿ ಕಂಡು ಬರುವದು ಈ ವಿಚಾರವು ಹೊಸ ಒಡಂಬಡಿಕಂಯಲ್ಲಿ ಸಿಕ್ಕಿದ್ದು. ಮುಂದೆ, ಈ ವಿಚಾರವು ಅದರಲ್ಲಿ ಅನೇಕ ಪಂಗಡಗಳಲ್ಲಿರುವವು, ಬೋಧನೆಯಲ್ಲಿ ಭಿನ್ನವಾಗಿಯೂ ಮತ್ತು ತದ್ವಿರುದ್ಧ ತಾತ್ವಿಕವನ್ನು, ಕ್ರಿಸ್ತನ ದೇಹವನ್ನು ಹೊಸ ಒಡಂಬಡಿಕೆಯ ವಿದೇಶಿ ಬೋಧನೆಯಿಂದ ಸರಿದೂಗಿಸುವವರಾಗಿರುತ್ತಾರೆ. ಸಭೆಯು ಯಾವುದೇ ಭಾಗವನ್ನು ಹೊಂದಿರಬಾರದು ಎಂಬುದಕ್ಕೆ ನೇರ ವಿರೋಧವಿರುವ ವಾಸ್ತವವು ಇದಾಗಿದೆ (ನೋಡಿರಿ 1 ಕೊರಿಂಥ 1:10).

ಕ್ರಿಸ್ತನ "ದೇಹವಾದ" ಸಭೆಯು ವೇದಭಾಗದಲ್ಲಿ ಎಲ್ಲೋ ಒಂದೆಡೆ ನಮಗೆ ಕಲಿಸಲ್ಪಟ್ಟ ಅನೇಕ ಅರ್ಥಗಳನ್ನು ಹೊಂದಿದೆ. ಕ್ರಿಸ್ತನು ಸಭೆಯ ಶಿರಸ್ಸಾಗಿರುವಂತೆಯೇ ಆತನು ಸಭೆಯ ಮೇಲೆ ಎಲ್ಲಾ ಅಧಿಕಾರವನ್ನು ಹೊಂದಿದ್ದಾನೆ ಮತ್ತು ಹೊಸ ಒಡಂಬಡಿಕೆಯ ಮೂಲಕ

ಪ್ರಕಟವಾಗುವಂಥವುಗಳನ್ನು ತನ್ನ ಚಿತ್ತಾನುಸಾರವಾಗಿ ಕಾರ್ಯಗಳನ್ನು ನಿರ್ಧರಿಸುವವನ್ನು ಆಗಿರುತ್ತಾನೆ (ನೋಡಿರಿ ಮತ್ತಾಯ 28:18; ಕೊಲೊಸ್ಸೆ 1:18; 1 ಪೇತ್ರನು 4:11). ದೇಹವು ಸೂಚಿಸುವಂತೆ ಸಭೆಯ ವಿವರಣೆಯು ಅದು ಅಲ್ಲಿ "ಅನೇಕ ಸದಸ್ಯರು ಇರುತ್ತಾರೆ" ಆದರೆ "ಒಂದೇ ದೇಹವು" ಇರುತ್ತದೆ (1 ಕೊರಿಂಥ 12:12). ಕ್ರೈಸ್ತರು "ಒಂದೇ ದೇಹವಾಗುವುದಕ್ಕೆ ಒಂದೇ ಆತ್ಮನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡೆವು" (1 ಕೊರಿಂಥ 12:13). ನಾವು ಸೂಚನೆಯ ಮೂಲಕ ದೀಕ್ಷಾಸ್ನಾನ ಮಾಡಿಸಿಕೊಂಡಿರಬಹುದು ಅಥವಾ ದೀಕ್ಷಾಸ್ನಾನದ ಸಮಯದಲ್ಲಿ ಒಂದೇ ದೇಹದಲ್ಲಿ ಆತ್ಮನು ನಮ್ಮಲ್ಲಿ ಇದ್ದಿರಬಹುದು. ಇದರ ಅರ್ಥ ಪ್ರತಿಯೊಬ್ಬ ಕ್ರೈಸ್ತನೂ ಪರಿಶುದ್ಧಾತ್ಮನಲ್ಲಿ ದೀಕ್ಷಾಸ್ನಾನ ಪಡೆಯಬೇಕೆಂದಲ್ಲಾ. ವೇದಭಾಗದಲ್ಲಿನ ಕೇವಲ ಎರಡು ಘಟನೆಗಳು ಪರಿಶುದ್ಧಾತ್ಮನಲ್ಲಿ ದೀಕ್ಷಾಸ್ನಾನವನ್ನು ಗುರುತಿಸಿವೆ: ಇವುಗಳು ಅಪೊಸ್ತಲರ ಕೃತ್ಯಗಳು 1:5; 2:4 ಅಪೊಸ್ತಲರನ್ನು ಒಳಗೊಂಡವು ಮತ್ತು ಅಪೊಸ್ತಲರ ಕೃತ್ಯಗಳು 10:44-47; 11:15-17ರಲ್ಲಿನ ಕೋರ್ನೆಲ್ಯನು ಮತ್ತು ಆತನ ಜೊತೆಯಿದ್ದವರು. 1 ಕೊರಿಂಥ 12:13ರಲ್ಲಿ, ಪೌಲನು "ನಾವೆಲ್ಲರೂ ಒಂದೇ ದೇಹವಾಗುವುದಕ್ಕೆ ಒಂದೇ ಆತ್ಮಬಲಿ ದೀಕ್ಷಾಸ್ನಾನ ಮಾಡಿಸಿಕೊಂಡೆವು" ಎಂದು ಹೇಳುತ್ತಾನೆ. ಈ ದೀಕ್ಷಾಸ್ನಾನವು, "ಎಲ್ಲರಿಗೋಸ್ಕರ" ಇರುವುದಾಗಿದ್ದು (ನೋಡಿರಿ ಮತ್ತಾಯ 28:19, 20; ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 2:38, 39), ನೀರಿನ ಅವಶ್ಯಕತೆಯನ್ನು ಹೊಂದಿದೆ (ಅಪೊಸ್ತಲರ ಕೃತ್ಯಗಳು 8:36-39). ಎಫೆಸ 4:5ರಲ್ಲಿ ಹೇಳುವಂತೆ ಅಲ್ಲಿ ನಮ್ಮನ್ನು "ಒಂದೇ ದೇಹದಲ್ಲಿ" ಸೇರಿ ಸುವಂಥ ಒಂದೇ "ದೀಕ್ಷಾಸ್ನಾನವಿದೆ" ಇಂದು ನಮಗೆ ಇದೆ.

ದೇಹದ ಪ್ರತಿಯೊಬ್ಬ ಸದಸ್ಯನೂ ವಿಭಿನ್ನವಾದ ಕಾರ್ಯವನ್ನು ಹೊಂದಿದ್ದಾನೆ ಎಂದು ಮುಂದೆ ಪೌಲನು ತೋರಿಸುತ್ತಾನೆ (1 ಕೊರಿಂಥ 12:14-20). ಯೋಗ್ಯವಾದ ಕಾರ್ಯವನ್ನು ಮಾಡಲು ದೇವರು ಭೌತಿಕ ದೇಹವನ್ನು ರೂಪಿಸಿದಂತೆಯೇ ಪ್ರತಿಯೊಬ್ಬ ಸದಸ್ಯರು ನೇಮಿಸಿದ ಕೆಲಸವನ್ನು ಸಂಪೂರ್ಣಗೊಳಿಸುವ ಹಾಗೆಯೇ ಸಭೆಯಲ್ಲಿನ ಪ್ರತಿಯೊಬ್ಬ ಸದಸ್ಯರು ತಮ್ಮ ಸ್ವಂತ ತಲಾಂತುಗಳಿಂದ ಅಥವಾ ಅವರಗಳಿಂದ ಸಂಪೂರ್ಣ ದೇಹಕ್ಕೆ ಕೊಡುಗೆಗಾಗಿ ಕೊಡಬೇಕು ಎಂದು ಪೌಲನು ಸೂಚಿಸುತ್ತಾನೆ. ದೇಹದ ಪ್ರತಿಯೊಬ್ಬ ಸದಸ್ಯನೂ ಪ್ರಮುಖನಾಗಿದ್ದಾನೆ ಎಂದು ಪೌಲನು ಸೂಚಿಸುತ್ತಾನೆ (1 ಕೊರಿಂಥ 12:21-24). ಉದಾಹರಣೆಗೆ ಭೌತಿಕ ದೇಹದಲ್ಲಿ, ಕಣ್ಣು ನೋಡುವುದಕ್ಕೆ ಯೋಗ್ಯವಾಗಿದೆ, ಹೊರತು ಕೇಳುವುದಕ್ಕಲ್ಲ. ಭೌತಿಕ ದೇಹವು ಕಾರ್ಯ ಮಾಡುವದು ಪ್ರತಿಯೊಂದು ಸದಸ್ಯನು ತನ್ನ ಕಾರ್ಯ ಮಾಡುವಾಗಲೇ. ಅದರಂತೆಯೇ ಸಭೆಯೆಂಬ ಕ್ರಿಸ್ತ ದೇಹದ ಪ್ರತಿಯೊಬ್ಬ ಸದಸ್ಯನೂ, ತಾನು ಮಾಡಬೇಕಾದದ್ದನ್ನು ಮಾಡಿದಾಗ, ದೇವರು ಏನು ಮಾಡಬೇಕೆನ್ನುತ್ತಾನೋ ಅದನ್ನು ಸಂಪೂರ್ಣ ದೇಹವು ಪೂರ್ತಿಗೊಳಿಸುವುದಾಗಿದೆ.

ದೇಹವು ಒಂದಾಗಿ ಇರುವುದಾಗಿದೆ. ಭಾಗವಾದ ಭೌತಿಕ ದೇಹವು ಹೇಗೆ ಯೋಗ್ಯವಾದ ಕಾರ್ಯಮಾಡದೋ ಹಾಗೆಯೇ ತನ್ನ ಕಾರ್ಯವನ್ನು ಯೋಗ್ಯವಾಗಿ ಮಾಡಲಾಗದು. "ಕ್ರಿಸ್ತನ ದೇಹವು ಒಬ್ಬರನೊಬ್ಬರು ಪ್ರೀತಿಸುವ ಮತ್ತು ಒಂದಕ್ಕೊಂದರ ಹಿತವನ್ನು ಚಿಂತಿಸುವ" ಅದರಂತೆಯೇ "ಒಂದು ಅಂಗಕ್ಕೆ ನೋವಾದರೆ ಎಲ್ಲಾ ಅಂಗಗಳಿಗೆ ನೋವಾಗುವ" ಸದಸ್ಯರನ್ನು ಒಂದಾಗಿ ಮಾಡುತ್ತದೆ (1 ಕೊರಿಂಥ 12:25, 26). ಭೌತಿಕ ದೇಹದ ಒಂದು ಅಂಗಕ್ಕೆ ನೋವಾದರೆ ಸಂಪೂರ್ಣ ದೇಹವು ನೋವಿನಲ್ಲಿರುವದು. ಅದೇ ರೀತಿಯಲ್ಲಿ, ಸಭೆಯ ಒಬ್ಬ ಸದಸ್ಯನಿಗೆ ನೋವಾದರೆ; ಎಲ್ಲರೂ ನೋವಿನಲ್ಲಿ ಇದ್ದಂತೆ; ಮತ್ತು ಒಬ್ಬ ಸದಸ್ಯನು ಸಾಧನೆಯನ್ನು ಸಾಧಿಸಿದ್ದಾರೆ, ಎಲ್ಲರೂ ಸಾಧನೆ ಮಾಡಿದಂತೆಯೇ.

ವೇದವಾಕ್ಯಕ್ಕೆ ಯೋಗ್ಯವಾದ ಗೌರವವನ್ನು ಇಟ್ಟುಕೊಳ್ಳುವ ಮೂಲಕ ಸತ್ಯವೇದಿಯ ಮೂಲದ ಐಕ್ಯತೆಯಲ್ಲಿ ಇರುವುದರ ಬಗ್ಗೆ ಪೌಲನು ಮಾತನಾಡಿದಂತೆ, "ಅಲ್ಲಿ ಒಂದೇ ದೇಹವಿದೆ" ಎಂದು ಆತನು ಹೇಳುತ್ತಾನೆ. ನಮ್ಮ ಅನೇಕತ್ವದ ಸಂಸಕೃತಿಯು ಅದಕ್ಕಿಂತ

ಹೆಚ್ಚಿನದನ್ನು ಯೋಚಿಸಿದ್ದಾಗ್ಯೂ ಕೂಡಾ ಕ್ರಿಸ್ತನು ಒಂದೇ ಒಂದು ಸಭೆಯಾಗಿದ್ದಾನೆ.

## ಒಂದೇ ಆತ್ಮ (4:4)

**[4]ಒಬ್ಬನೇ ಆತ್ಮನನ್ನು ಹೊಂದಿದವರು, ...**

**ವಚನ 4. ಒಬ್ಬನೇ ಆತ್ಮ** ಇದು ಪರಿಶುದ್ಧಾತ್ಮ, ಪ್ರಕಟಣೆಯ ಮೂಲಕ, ದೇವರ ಉದ್ದೇಶ ಎಂದು ತಿಳಿಯುವಂತದ್ದಾಗಿದೆ (ನೋಡಿರಿ 1 ಕೊರಿಂಥ 2:13; ಎಫೆಸ 3:1-10). ಆತನು ದೇಹಕ್ಕೆ ಜೀವಕೊಡುವವನಾಗಿದ್ದಾನೆ (2 ಕೊರಿಂಥ 3:6); ಸಭೆಯಲ್ಲಿ ವಾಸಿಸುವವನೂ (1 ಕೊರಿಂಥ 3:16); ಮತ್ತು ಕ್ರಿಸ್ತನಲ್ಲಿ ಇರುವವನೂ ಆಗಿದ್ದಾನೆ (1 ಕೊರಿಂಥ 6:19). ಆತನು ಬಲಗೊಳಿಸುವವನೂ ಸಹ ಆಗಿದ್ದಾನೆ (ಎಫೆಸ 3:16) ಮತ್ತು ಕರ್ತನಿಂದ ಬರಲಿರುವ ಆತನ ಸಂಪೂರ್ಣ ಬಾಧ್ಯತೆಯು ಈಡುಕೊಡುವಂತೆ ಮುದ್ರೆಹಾಕಿದ್ದಾಗಿದೆ (ನೋಡಿರಿ 1:13, 14). ಈ ಒಂದು ಆತ್ಮವು ದೇಹದಲ್ಲಿ ದೇವರ ಮಾರ್ಗವನ್ನು ಕೊಡುವಂತದ್ದಾಗಿದೆ (2:18) ಮತ್ತು ದೇಹದೊಳಗಣ ಐಕ್ಯತೆಯ ಮೂಲವೂ ಆಗಿದೆ. ಆದ್ದರಿಂದ, ಇದು "ಆತ್ಮದ ಐಕ್ಯತೆ" ಎಂದು ಕರೆಯಲ್ಪಡುವದು ಆಗಿದೆ (4:3).

## ಒಂದೇ ನಿರೀಕ್ಷೆ (4:4)

**[4]ಒಂದೇ ಪದವಿಯನ್ನು ನಿರೀಕ್ಷಿಸುವುದಕ್ಕೆ ಕರೆಯಲ್ಪಟ್ಟವರು.**

**ವಚನ 4. ಕರೆಗಾಗಿ** ಮತ್ತು **ಕರೆಯಲ್ಪಟ್ಟವರು** ಕರೆಯಲ್ಪಟ್ಟವರು ಎಂಬ ವಿಷಯಗಳು ಈ ಪತ್ರದಲ್ಲಿ ಈ ಹಿಂದೆಯೇ ಇದ್ದವುಗಳು ಆಗಿವೆ. 1:18ರಲ್ಲಿ ಪೌಲನು ಕ್ರೈಸ್ತರು ತಮ್ಮ ಮನೋನೇತ್ರ ಗಳನ್ನು ಬೆಳಗಿಸುವವರಾಗಿರಲಿ ಎಂದು ಪ್ರಾರ್ಥಿಸುತ್ತಾನೆ ಇದರ ಮೂಲಕ ಅವರು "ದೇವರ ಕರೆಯುವಿಕೆಯಲ್ಲಿನ ನಿರೀಕ್ಷೆಯನ್ನು" ತಿಳಿಯಬಹುದಾಗಿದೆ. 4:1ರಲ್ಲಿ ಆತನು "ಅವರು ದೇವರಿಂದ ಕರೆಯಲ್ಪಟ್ಟಿರುವದು ಯೋಗ್ಯರಾಗಿ ನಡಕೊಳ್ಳಬೇಕೆಂಬ ಕಾರಣದಿಂದಲೇ ಕರೆಯಲ್ಪಟ್ಟದ್ದು ಎಂದು ಪ್ರಬೋಧಿಸುತ್ತಾನೆ." ಮೊದಲ ಪರಿಚ್ಛೇದದಲ್ಲಿ, ಕರೆದವನ ಬಗ್ಗೆ ಒತ್ತುಕೊಡುವಿಕೆಯು ಇರುವದಾದರೆ ಎರಡನೆಯದಲ್ಲಿ ತನ್ನ ಕರೆಯುವಿಕೆಯನ್ನು ಒತ್ತಿಹೇಳು ವುದಾಗಿದೆ. ವಚನ 4 ಕರೆಯಲ್ಪಟ್ಟ ವ್ಯಕ್ತಿಗಳ ಬಗ್ಗೆ ಮಾತನಾಡುವುದಾಗಿದೆ. ಕರೆಯುವಿಕೆ ಮತ್ತು ನಿರೀಕ್ಷೆ ಇವುಗಳನ್ನು ಐಕ್ಯತೆಯು ಹೇಗೆ ಸಂಬಂಧಿಸುವುದಾಗಿದೆ? ಸಭೆಯಲ್ಲಿರುವ ಅನ್ಯಜನರು ಒಂದು ಸಾರಿ ಕ್ರಿಸ್ತನಿಂದ ಬೇರ್ಪಡಿಸಲ್ಪಟ್ಟವರು ಮತ್ತು ನಿರೀಕ್ಷೆಯಿಲ್ಲದವರೂ ಆಗಿದ್ದರು, ಆದರೆ ಅವರು ಕ್ರೈಸ್ತರಾದ ಮೇಲೆ ಅವರ ಕ್ರಿಸ್ತನಲ್ಲಿ ನಿರೀಕ್ಷೆಯನ್ನು ಹೊಂದಿದರು (1:12; 2:12). ಈ ನಿರೀಕ್ಷೆಯು ಎಫೆಸದವರಿಗೆ ಕೊಡಲ್ಪಟ್ಟಿತು ಯಾಕೆಂದರೆ ದೇವರು ಅವರಿಗೆ ನಿರೀಕ್ಷೆಯನ್ನು ತರುವ ಕೊಡುವುದರಲ್ಲಿ ತೊಡಗಿದ್ದರಿಂದಲೇ (1:18). ಅವರ ನಿರೀಕ್ಷೆಯು ಪರಲೋಕ ಮತ್ತು ಭೂಲೋಕಗಳನ್ನು (ಅದು ದೇವರು ಮತ್ತು ಮಾನವನ ಸಂಧಾನ ಆಗಿದೆ) ಕ್ರಿಸ್ತನಲ್ಲಿ ಒಂದು ಮಾಡುವ ದೇವರ ನಿತ್ಯದ ಉದ್ದೇಶದ ಭಾಗವಾಗಿ ಅವರು ಇರುವ ವಾಸ್ತವದಲ್ಲಿ ಉಳಿಯುವುದಾಗಿದೆ (ನೋಡಿರಿ 1:9, 10). ಯೆಹೂದ್ಯರು ಮತ್ತು ಅನ್ಯಜನರು "ಒಂದೇ ದೇಹದಲ್ಲಿ" "ಒಬ್ಬ ನೂತನ ಮನುಷ್ಯನನ್ನು" ಇರಿಸುವದು ಸುಳ್ಳಾಗಿ ಪರಿಣಮಿಸಿದಾಗ ಪರಲೋಕ ಮತ್ತು ಭೂಲೋಕಗಳನ್ನು ಸೇರಿಸುವ ಉದ್ದೇಶವು ಅಲ್ಪವಾಗಿ ಕಾಣುತ್ತದೆ (2:15, 16). ಈ ಐಕ್ಯತೆಯು ನಿರೀಕ್ಷೆಯನ್ನು ತರುವುದಾಗಿದ್ದಕ್ಕೆ ಕಾರಣ ದೇವರ ಮರುಸಂಧಾನ (2:16) ಮತ್ತು ದೇಹದಲ್ಲಿನ ರಕ್ಷಣೆ (5:23) ಸಭೆಯ ಜೀವಿತದಲ್ಲಿ ಪ್ರತಿದಿನ ಜೀವಿಸುವದು ಆಗಿದೆ.

**ನಿರೀಕ್ಷೆ** ಇದು *elpis* ದಿಂದ ಭಾಷಾಂತರವಾಗಿದ್ದು, "ಕೆಲ ಒಳ್ಳೆಯದರೊಡನೆ

ನಿರೀಕ್ಷೆಯೊಡನೆ ಹೊಂದಿರುವ ಆಶೆ" ಎಂಬರ್ಥವಾಗಿದೆ.[1] ನಾವು ಸುವಾರ್ತೆಯಿಂದ ಕರೆಯಲ್ಪಟ್ಟೆವು; ಮತ್ತು ನಾವು ಸರಿಯಾದ ರೀತಿಯಲ್ಲಿ ಪ್ರತಿಕ್ರಯಿಸುವಾಗ, ನಾವು "ಕರೆಯಲ್ಪಟ್ಟವರು" ಆಗುತ್ತೇವೆ. ಕರೆಯಲ್ಪಟ್ಟಂತೆ, ನಾವು ಮರಣದ ಪುನರುತ್ಥಾನದಲ್ಲಿ ನಾವು ನಿರೀಕ್ಷೆಯನ್ನು ಇಡಬೇಕು; ನಾವು ಕ್ರಿಸ್ತನಲ್ಲಿ ನಿರೀಕ್ಷೆಯಿಂದ ಇದ್ದೇವೆ; ನಿತ್ಯಜೀವಿತದಲ್ಲಿ ನಾವು ನಿರೀಕ್ಷೆ ಹೊಂದಿದ್ದೇವೆ; ಕ್ರಿಸ್ತನ ಎರಡನೆಯ ಬರೋಣದ ಬಗ್ಗೆ ನಮಗೆ ನಿರೀಕ್ಷೆ ಇದೆ; ಆತನು ಬಂದಾಗ ನಾವೂ ಕೂಡಾ ಆತನ ಹಾಗೆ ಆಗುವೆವು ಎಂಬ ನಿರೀಕ್ಷೆಯು ನಮ್ಮಲ್ಲಿದೆ; ಮತ್ತು ನಮಗೆ ಪರಲೋಕದ ನಿರೀಕ್ಷೆಯು ಇದೆ.[2] ಈ ಎಲ್ಲವುಗಳು ನಮ್ಮ ನಿರೀಕ್ಷೆಯಲ್ಲಿನ "[ನಮ್ಮ] ಕರೆಯುವಿಕೆಯ ನಿರೀಕ್ಷೆಯ" ಒಂದು ಭಾಗವಾಗಿವೆ.

## ಒಬ್ಬನೇ ಕರ್ತನು (4:5)

**5ನಿಮ್ಮೆಲರಿಗೂ ಕರ್ತನು ಒಬ್ಬನೇ, ...**

**ವಚನ 5. ಕರ್ತನು ಒಬ್ಬನೇ** ಇದು ಯೇಸು ಕ್ರಿಸ್ತನನ್ನು ಸೂಚಿಸುವುದಾಗಿದೆ. "ಕರ್ತನು" ಕ್ರಿಸ್ತನಿಗಾಗಿ ಪೌಲನ ಪ್ರೀಯವಾದ ಶೀರ್ಷಿಕೆಯು ಆಗಿದೆ.[3] ಹೊಸ ಒಡಂಬಡಿಕೆಯಲ್ಲಿ ಈ ಪದವು ಯೇಸು ಕ್ರಿಸ್ತನ ಮರಣ, ಪುನರುತ್ಥಾನ, ಮತ್ತು ಏರಿಸಲ್ಪಡುವಿಕೆ ಸಂಬಂಧಪಟ್ಟಂತೆ ಅನ್ವಯಿಸುವುದಾಗಿದೆ. ಆದಿ ಸಭೆಯ ದೊಡ್ಡ ಅರಿಕೆ ಎಂದರೆ "ಯೇಸುವು ಕರ್ತನು" ಎಂಬುದೆ.[4]

"ಕರ್ತನು" ಎಂಬ ಶೀರ್ಷಿಕೆಯು ನಾಲ್ಕು ರೀತಿಯ ಅರ್ಥಗಳನ್ನು ಒಳಗೊಂಡಿದ್ದಾಗಿದೆ. ಮೊದಲನೆಯದಾಗಿ ಇದು ಹೆಚ್ಚಿನ *ಅಧಿಕಾರದ* ಅಂದರೆ ಎಸ್ಟೇಟಿನ ಒಡೆಯ, ಗುಲಾಮರ ಮೇಲೆ ಅಧಿಕಾರವನ್ನು ಹೊಂದಿದ ಒಡೆಯ, ಅಥವಾ ರಾಜ್ಯವನ್ನು ಆಳುವ ಅರಸನ ಬಗ್ಗೆ ಮಾತನಾಡುವುದಾಗಿದೆ.[5] ಒಬ್ಬನೇ ಕರ್ತನಾದಂಥ ಯೇಸು ಎಲ್ಲ ಅಧಿಕಾರವನ್ನು ಹೊಂದಿದ್ದಾನೆ (ಮತ್ತಾಯ 28:18). ನಾವು ನಂಬುವ, ಬೋಧಿಸುವ, ಮತ್ತು ಅಭ್ಯಾಸಮಾಡುವ ಎಲ್ಲವುಗಳ ಮೇಲೆ ಕ್ರಿಸ್ತನು ಮತ್ತು ಆತನ ವಾಕ್ಯಗಳು ಅಧಿಕಾರವನ್ನು ಹೊಂದಿವೆ. ಮನುಷ್ಯನು ಯೋಚಿಸುವ, ಅನುಭವಿಸುವ ಅಥವಾ ಇಚ್ಛಿಸುವ ಎಲ್ಲದರ ಮೇಲೆ ಆತನ ಅಧಿಕಾರವು ವ್ಯಾಪಿಸಿದೆ. ಯೇಸುವು "ಎಲ್ಲಾದರ ಮೇಲೆ ... ಸಭೆಗೆ ಶಿರಸ್ಸಾಗಿ" ಇರುವದು ಎಂಬುದಾಗಿ ಪೌಲನು ಹೇಳುವಲ್ಲಿ (ಎಫೆಸ 1:22), ಆತನು ಸಭೆಯ ಅಧಿಕಾರವನ್ನು ಸೂಚಿಸುವವನಾಗಿದ್ದಾನೆ.

ಎರಡನೆಯದಾಗಿ, "ಕರ್ತನು" ಎಂಬುದು *ಒಡೆತನವನ್ನು* ಸೂಚಿಸುವುದಾಗಿದೆ. ಯೇಸು ನಮ್ಮ ಬಿಡುಗಡೆಗೋಸ್ಕರ ನಮ್ಮ ಸ್ವಂತವಾಗಿಸಿಕೊಂಡಿದ್ದಾನೆ (1:7) ಮತ್ತು ತನ್ನ ರಕ್ತದಿಂದ ಸಭೆಯನ್ನು ಕೊಂಡುಕೊಡುವನಾಗಿದ್ದಾನೆ (ಅಪೊಸ್ತಲರ ಕೃತ್ಯಗಳು 20:28). ನಾವು ಕ್ರಯಕೊಟ್ಟು ಕೊಂಡುದ್ದರಿಂದ, ಇನ್ನು ಮುಂದೆ ನಾವು ನಮ್ಮ ಸ್ವತ್ತಲ್ಲ (ನೋಡಿರಿ 1 ಕೊರಿಂಥ 6:19, 20). ಮೂರನೆಯದು, ಆತನು ನಮ್ಮ ಕರ್ತನಾಗಿದ್ದುದರಿಂದ, ಕ್ರಿಸ್ತನು ನಮ್ಮ ಒಡೆಯನಾಗಿದ್ದಾನೆ, ಮತ್ತು ನಾವು ಆತನ ಸೇವಕರಾಗಿದ್ದೇವೆ. ಪೌಲನು ಹಲವು ಬಾರಿ ತನ್ನನ್ನು ಸೂಚಿಸುವಲ್ಲಿ, ಕ್ರಿಸನ ಒಡೆತನವನ್ನು ಗುರುತಿಸುವುದನ್ನು ಸೂಚಿಸುವಲ್ಲಿ "ದಾಸನು" ಎಂಬ ಪದವು ಬಳಸಿದ್ದಾನೆ. ನಾಲ್ಕನೆಯದಾಗಿ, ತನ್ನ ರಾಜ್ಯದಲ್ಲಿ ಅರಸರ ಮೇಲಿನ ಕರ್ತನಾಗಿರುವಾತನು ಆಗಿದ್ದಾನೆ. ನಾವು ಕ್ರಿಸ್ತನ ಅಧಿಕಾರದ ಅಡಿಯಲ್ಲಿ ಜೀವಿಸುತ್ತಿರುವಂತೆಯೇ, ಕ್ರಿಸ್ತನ ಸ್ವಂತದವರೂ, ಕ್ರಿಸ್ತನ ಸೇವಕರೂ, ಮತ್ತು ಯೇಸುವಿನಲ್ಲಿ ಅರಸನು ಎಂದು ಗುರುತಿಸಿದವರೂ, ಕ್ರಿಸ್ತನ ಮಾತನ್ನು ಕೇಳುವ ಆತನ ಹಿಂಬಾಲಿಸುವ ಮತ್ತು ಎಲ್ಲಾ ಸಂಗತಿಗಳಲ್ಲಿ ಆತನಿಗೆ ವಿಧೇಯರಾಗುವ ಹಂಗಿನಲ್ಲಿ ಇರುವವರೂ ಆಗಿದ್ದೇವೆ. ಆತನು "ಒಬ್ಬನೇ ಕರ್ತನು" ಆಗಿದ್ದಾನೆ.

## ಒಂದೇ ನಂಬಿಕೆ (4:5)

**[5]ಭರವಸವು ಒಂದೇ, ...**

**ವಚನ 5. ಭರವಸವು ಒಂದೇ** ಎಂಬುದು ಸತ್ಯದ ಸಂಪೂರ್ಣ ಭಾಗವು ಕ್ರೈಸ್ತ ಧರ್ಮದಿಂದ ಮತ್ತು ತಾನೇ ಕ್ರೈಸ್ತತ್ವದ ಆಧಾರವನ್ನು ಆವರಿಸಿಕೊಂಡಿದೆ. ಇದು "ದೇವ ಜನರಿಗೆ ಶಾಶ್ವತವಾಗಿರುವಂತೆ ಒಂದೇ ಸಾರಿ ಒಪ್ಪಿಸಲ್ಪಟ್ಟ ನಂಬಿಕೆ" ಆಗಿದ್ದು (ಯೂದ 3), ಅನೇಕರು ವಿಧೇಯರಾದಂಥ ನಂಬಿಕೆಯು ಇದಾಗಿದೆ (ಅಪೊಸ್ತಲರ ಕೃತ್ಯಗಳು 6:7). ಪೌಲನು ಬೋಧಿಸುವ ಈ ನಂಬಿಕೆಯು ಜನರು ಘೋಷಿಸುವುದರಲ್ಲಿ ಒಂದಾಗಿದೆ (ಗಲಾತ್ಯ 1:23; 1 ತಿಮೊಥೆ 4:6). ಇದು ಬಿದ್ದು ಹೋದಂಥದರಿಂದ ಆದ ನಂಬಿಕೆ, ನಾವು ನಿರಾಕರಿಸಬಹುದಾದ ನಂಬಿಕೆ, ಮತ್ತು ನಾವು ದೂರ ಒಡಬಹುದಾದ ನಂಬಿಕೆಯು ಇದಾಗಿದೆ (1 ತಿಮೊಥೆ 4:1; 5:8; 6:10, 21). ಅಲ್ಲಿ "ಒಂದೇ ನಂಬಿಕೆಯು" ಇದೆ ಯಾಕೆಂದರೆ ಅಲ್ಲಿ ಒಂದೇ ಒಂದು ಕ್ರೈಸ್ತತ್ವವು, ಸಭೆಗಾಗಿನ ಒಂದೇ ದೇಹದ ಸತ್ಯವು ಮತ್ತು ಇಂದಿನ ಜನರಿಗೆ ದೇವರಿಂದ ಒಂದೇ ಒಂದು ಪ್ರಕಟಣೆಯು ಇರುವುದಾಗಿದೆ.

## ಒಂದೇ ದೀಕ್ಷಾಸ್ನಾನ (4:5)

**[5]ಒಂದೇ ದೀಕ್ಷಾಸ್ನಾನ.**

**ವಚನ 5. ಒಂದೇ ದೀಕ್ಷಾಸ್ನಾನ** - ಇಂದು ಯೋಗ್ಯವಾಗಿರುವಂಥದ್ದು ಅಂದರೆ ರೋಮಾಪುರ 6:4 ಮತ್ತು ಕೊಲೊಸ್ಸೆ 2:12ರಲ್ಲಿರುವಂಥ - ನೀರಿನಲ್ಲಿ ಮುಳುಗಿಸುವದು ಅಥವಾ ನೀರಿನಲ್ಲಿ ಇರಿಸುವದು ಆಗಿದೆ. "ದೀಕ್ಷಾಸ್ನಾನ" ಇದು (*baptisma*)ದ ಅಕ್ಷರಗಳಿಂದ ಭಾಷಾಂತರಗೊಂಡಿದ್ದು, ಎದ್ದುವದು ಅಥವಾ ಮುಳುಗಿಸುವದು ಎಂದಾಗಿದೆ.[6] ದೀಕ್ಷಾಸ್ನಾನವು ಮತ್ತಾಯ 28:19, 20ರಲ್ಲಿ ಆಜ್ಞಾಪಿಸಿದ್ದು ಆಗಿದ್ದು ನೀರಿನ ಕೆಳಕ್ಕೆ ಹೋಗುವ ಮತ್ತು ಮೇಲಕ್ಕೆ ಬರುವಂತೆ ಆಜ್ಞಾಪಿಸುವದು ಆಗಿದೆ (ನೋಡಿರಿ ಯೋಹಾನ 3:23; ಅಪೊಸ್ತಲರ ಕೃತ್ಯಗಳು 8:36, 38, 39). ಹೊಸ ಒಡಂಬಡಿಕೆಯ ದೀಕ್ಷಾಸ್ನಾನದ ವಿಷಯವು ಪಶ್ಚಾತ್ತಾಪಪಡುವ ಜನರು ಬಯಸುವದು (ಮಾರ್ಕ 16:15, 16; ಅಪೊಸ್ತಲರ ಕೃತ್ಯಗಳು 2:38) ಮತ್ತು ದೇವರ ಮಗನಾದ ಯೇಸುವಿನಲ್ಲಿ ನಮ್ಮ ನಂಬಿಕೆಯನ್ನು ಅರಿಕೆಮಾಡುವದು ಆಗಿದೆ (ಮತ್ತಾಯ 10:32, 33; ಅಪೊಸ್ತಲರ ಕೃತ್ಯಗಳು 8:37; ರೋಮಾಪುರ 10:9, 10) ದೀಕ್ಷಾಸ್ನಾನ ನಾಲ್ಕು ರೀತಿಯ ಉದ್ದೇಶವು ರಕ್ಷಿಸಲ್ಪಡುವದು (ಮಾರ್ಕ 16:16; 1 ಪೇತ್ರನು 3:21), ಪಾಪದಿಂದ ಕ್ಷಮಾಪಣೆ ಹೊಂದುವದು (ಅಪೊಸ್ತಲರ ಕೃತ್ಯಗಳು 2:38), ಆತನ ಸಭೆಯಲ್ಲಿ ಸೇರುವದು (1 ಕೊರಿಂಥ 12:13), ಮತ್ತು ಕ್ರಿಸ್ತನಲ್ಲಿರುವದು ಆಗಿದೆ (ರೋಮಾಪುರ 6:3; ಗಲಾತ್ಯ 3:27).

ಅಪೊಸ್ತಲರ ಕೃತ್ಯಗಳು 2:38ರಲ್ಲಿ "ನಿಮ್ಮ ಪಾಪಗಳ ಕ್ಷಮಾಪಣೆಗಾಗಿ" ಎಂದು ಕೆಲವರು ಹೇಳುವುದರ ಅರ್ಥವು "ಅದರ ಸಲುವಾಗಿ" ಎಂಬುದರ ಬದಲಾಗಿ "ಅದರಲ್ಲಿ" ಎಂದಾಗಿದೆ. ಹೇಗೋ, "ನಿಮ್ಮ ಪಾಪಗಳ ಕ್ಷಮಾಪಣೆಗಾಗಿ" ಎಂದು ಸೂಚಿಸುವದು ಎಂಬುದು (ಇಂಗ್ಲೀಷ ಮತ್ತು ಗ್ರೀಕ್ ಎರಡರಲ್ಲಿಯೂ) ಮತ್ತಾಯ 26:26-28ರಲ್ಲಿ ಯೇಸು ತನ್ನ ರಕ್ತ ಚಲ್ಲಲ್ಪಟ್ಟಿದ್ದು "ಪಾಪಗಳು ಈಗಾಗಲೇ ಕ್ಷಮಿಸಲ್ಪಟ್ಟಿರುವುದರಿಂದ" ಅಥವಾ "ಪಾಪಗಳು ಕ್ಷಮಿಸಲ್ಪಡುವ ನಿಟ್ಟಿನಲ್ಲಿರುವುದರಿಂದ" ಎಂದು ಹೇಳಿದ್ದಾನೆಯೇ? ಪಾಪ ಈಗಾಗಲೇ ಕ್ಷಮಿಸಲ್ಪಟ್ಟಿದ್ದಾದರೆ, ಯೇಸು ಯಾಕೆ ಮರಣಿಸಬೇಕಿತ್ತು? ಪಾಪಗಳು ದೀಕ್ಷಾಸ್ನಾನವು ಪಾಪಗಳ ಕ್ಷಮಾಪಣೆಯಲ್ಲಿ ಅವಿಭಾಜ್ಯವಾಗಿ ಸೇರಿದೆ. ದೀಕ್ಷಾಸ್ನಾನವು ಯಾವುದಕ್ಕೂ ಅದರಲ್ಲಿ ಮತ್ತು ಅದೇ ಸಂಪಾಸಿದ್ದು ಮತ್ತು ಗುಣಗಳು ಕೊಡದು; ಆದರೆ ಒಬ್ಬನು ದೇವರ ಕೃಪೆಯ ವರವನ್ನು ಅಂದರೆ ಪಾಪಗಳ

ಕ್ಷಮಾಪಣೆಯನ್ನು ಹೊಂದಿಕೊಂಡಿದ್ದಾರೆ ಇದು ವಿಜ್ಞಾಪನೆಯ ಕಾರ್ಯದಲ್ಲಿ ಆಗಿದೆ. ಇದು ಎಫೆಸ 4ರ "ಒಂದೇ ದೀಕ್ಷಾಸ್ನಾನ"ವಾಗಿದೆ.

## ಒಬ್ಬನೇ ದೇವರು (4:6)

**[6]ಎಲ್ಲರಿಗೂ ತಂದೆಯಾಗಿರುವ ದೇವರು ಒಬ್ಬನೇ; ಆತನು ಎಲ್ಲರ ಮೇಲಿರುವವನೂ ಎಲ್ಲರ ಮುಂಖಾತರ ಕಾರ್ಯನಡೆಸುವವನೂ ಎಲ್ಲರಲ್ಲಿ ವಾಸಿಸುವವನೂ ಆಗಿದ್ದಾನೆ.**

**ವಚನ 6. ದೇವರು ಒಬ್ಬನೇ** ಮತ್ತು ಕ್ರಿಸ್ತನ ಮೂಲಕ ಆತನು ಕ್ರೈಸ್ತರೆಲ್ಲರ **ತಂದೆಯಾಗಿದ್ದಾನೆ** ಯಾಕೆಂದರೆ ಕ್ರಿಸ್ತನಲ್ಲಿರುವವರೆಲ್ಲರೂ ಆತನ ಮಕ್ಕಳಾಗಿದ್ದಾರೆ (ರೋಮಾಪುರ 8:16, 17; ಗಲಾತ್ಯ 3:26, 27). ಈ ಒಬ್ಬನೇ ದೇವರು ಮತ್ತು **ಎಲ್ಲರಿಗೂ ತಂದೆಯಾಗಿರುವ** ಎಂಬುದರ ಬಗ್ಗೆ ಪೌಲನು ಖಂಡಿತವಾಗಿ ಮಾತನಾಡುವದು ದೇವರ ಸಾರ್ವಭೌಮತೆ ಅಥವಾ ಔನತ್ಯದ ಕುರಿತು ಆಗಿದೆ. ಅಂತಿಮವಾಗಿ, **ಎಲ್ಲರಲ್ಲಿ** ದೇವರು ಇರುವಾತನು ಎಂದು ಹೇಳಲ್ಪಟ್ಟಿರುವದು, ಆತನು ಜನರೊಡನೆ ವಾಸವಾಗಿದ್ದಾನೆ ಎಂಬುದನ್ನು ಸೂಚಿಸುವುದಾಗಿದೆ.

ಪೌಲನು ಇಟ್ಟಂಥ ಏಳು "ಐಕ್ಯತೆಯ ಕಂಬಗಳು" ಏಳು ಸತ್ಯಗಳು ನಮ್ಮಲ್ಲೆ ಎಲ್ಲರಿಂದ ಒಪ್ಪುವಂಥವು ಆಗಿದ್ದು ದೇವರು ಪ್ರಕಟಿಸಲ್ಪಟ್ಟ ಚಿತ್ತವನ್ನು ಯೋಗ್ಯಭಾವನೆಯನ್ನು ಹೊಂದುವುದನ್ನು ನಾವು ಎದುರುನೋಡುವಂಥದ್ದಾಗಿದೆ. ಈ ಮೂಲ ಸತ್ಯಗಳನ್ನು ಒಪ್ಪಿಕೊಳ್ಳುವುದರ ಮೂಲಕ ನಾವು "ಸಮಾಧಾನವೆಂಬ ಬಂಧದಿಂದ ಕಟ್ಟಲ್ಪಟ್ಟರಾಗಿದ್ದು ಪವಿತ್ರಾತ್ಮನಿಂದುಟಾಗುವ ಐಕ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಆಸಕ್ತರಾಗಿರೋಣ" (4:3).

## ಅನ್ವಯ

### ಐಕ್ಯತೆಗಾಗಿ ದೇವರ ಯೋಜನೆ (4:4-6)

ದೇವರ ಪ್ರಮುಖ ಯೋಜನೆಯು ಐಕ್ಯತೆಯಲ್ಲಿ ಒಂದಾಗಿರುವದು ಆಗಿದೆ. ಪೌಲನು ನಮ್ಮ ಐಕ್ಯತೆಯ ಹಿನ್ನಲೆಯ ಲೀತಿಯಲ್ಲಿ ಏಳನ್ನು "ಒಂದಾಗಿ" ಹೆಸರಿಸಿದನು. ಒಬ್ಬನೇ ಆತ್ಮನು ಒಂದೇ ದೇಹದಲ್ಲಿ ಪ್ರತಿಯೊಬ್ಬ ಸದಸ್ಯರಿಗೂ ಕೊಡಲ್ಪಟ್ಟಿದ್ದಾನೆ; ಆತನು ನಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ವಾಸಿಸುವವನಾಗಿದ್ದಾನೆ. ಒಂದೇ ನಿರೀಕ್ಷೆಯು ಪ್ರತಿಯೊಂದು ಹೃದಯವನ್ನು ತುಂಬುವುದಾಗಿದೆ, ಮತ್ತು ಅದು ಆಶೀರ್ವಾದಿಸಲ್ಪಟ್ಟಿದ್ದು ಆಗಿದ್ದು ನಮ್ಮ ಕರ್ತನಾದ ಯೇಸುಕ್ರಿಸ್ತನೆಡೆಗೆ ಮರಳುವುದಾಗಿದೆ. ನಾವು ಒಬ್ಬನೇ ಕರ್ತನನ್ನು ಹೊಂದಿದ್ದೇವೆ. ಒಂದೇ ನಂಬಿಕೆ, ಅದು ಒಂದೇ ಬೋಧನೆಯು ನಮ್ಮ ಜೀವಿತವನ್ನು ಆಳುವುದಾಗಿದೆ, ಮತ್ತು ನಾವು ಮೂಲ ಸಾಮಾನ್ಯವಾದ ನಂಬುಗೆಗಳಿಗೆ ಅಂಟಿಕೊಂಡಿದ್ದೇವೆ. ಎಲ್ಲ ಕ್ರೈಸ್ತರೂ ಒಂದೇ ಲೀತಿಯಲ್ಲಿ ಒಂದು ದೇಹದೊಳಗೆ ಪ್ರವೇಶಿಸುವವರಾಗಿದ್ದಾರೆ ಅದು ದೀಕ್ಷಾಸ್ನಾನದ ಮೂಲಕವೇ. ಅಲ್ಲಿ ಒಬ್ಬನೇ ದೇವರು ಮತ್ತು ನಮ್ಮೆಲ್ಲರ ತಂದೆಯು, ನಮ್ಮ ಪ್ರೀತಿಸುವ ಮತ್ತು ಪ್ರತಿಯೊಂದರ ನಿತ್ಯದ ಭೂತಕಾಲ ನಿತ್ಯತ್ವದ ಭವಿಷತ್‌ಕಾಲದ ನಿರ್ಮಾಪನೂ ಆಗಿದ್ದಾನೆ. ನಾವೆಲ್ಲರೂ ಒಂದೇ ಆಗಿರುವುದನ್ನು ಆತನು ಬಯಸುವವನಾಗಿದ್ದಾನೆ!

ತನ್ನ ಹಿಂಬಾಲಕರ ಐಕ್ಯತೆಗೋಸ್ಕರ ಯೇಸುವಿನ ಅಂತಿಮ ಪ್ರಾರ್ಥನೆಯು: "... ಪವಿತ್ರನಾದ ತಂದೆಯೇ ನಾವು ಒಂದಾಗಿ ಇರುವ ಹಾಗೆ ಇವರೂ ಒಂದಾಗಿರಬೇಕೆಂದು ನೀನು ನನಗೆ ಕೊಟ್ಟ ನಿನ್ನ ಹೆಸರಿನಲ್ಲಿ ಇವರನ್ನು ಕಾಯಬೇಕು ..." "ಅವರ ಐಕ್ಯವು ಪೂರ್ಣಸಿದ್ಧಿಗೆ ಬರುವುದರಿಂದ ನೀನು ನನ್ನನ್ನು ಕಳುಹಿಸಿಕೊಟ್ಟಿದ್ದಿ ... ಎಂದು ಲೋಕಕ್ಕೆ ತಿಳಿದುಬರುವದು" (ಯೋಹಾನ 17:11, 23).

Chris Bullard

ಟಿಪ್ಪಣಿಗಳು

[1]Spiros Zodhiates, ed., *The Complete Word Study New Testament,* 2d ed. (Chattanooga, Tenn.: AMG Publishers, 1991), 911. [2]See Acts 23:6; 24:15; 26:6, 7; Rom. 1:6; 8:24; 1 Cor. 15:19; Col. 1:5, 27; 2 Thess. 2:14; 1 Tim. 1:1; Tit. 2:13; 1 Jn. 3:2, 3. [3]See Rom. 10:9; 14:8, 9; 1 Cor. 8:6; 12:3; Phil. 2:9-11. [4]Willam Barclay, *Jesus As They Saw Him* (London: SCM Press, 1962), 408-20. [5]Ibid. [6]Walter Bauer, *A Greek-English Lexicon of the New Testament and Other Early Christian Literature,* 3d ed., rev. and ed. Frederick William Danker (Chicago: University of Chicago Press, 2000), 165.